# ನಿನ್ನ ತೈಲದ ಭರಣಿಯನ್ನು ಒಡೆದು ಹಾಕಿರುವೆಯಾ?[1]

## ಮತ್ತಾಯ 26:6-13; ಮಾರ್ಕ 14:3-9; ಯೋಹಾನ 12:1-8, ಒಂದು ನಿಕಟ ನೋಟ

ಮತ್ತಾಯ 26, ಮಾರ್ಕ 14, ಹಾಗೂ ಯೋಹಾನ 12ರ ಪುರಾತನ ದಾಖಲುಗಳಲ್ಲಿ ಕೆಲವು ಗಮನಾರ್ಹವಾದ ಘಟನೆಗಳಿವೆ. ಕ್ರೂಜೆಯು ಸಮೀಪವಾಗಿದ್ದು, ಆತನ ಹೃದಯವು ಬಹು ಭಾರವಾಗಿತ್ತು. ಅವರ ವೈರಿಗಳ ದ್ವೇಷ ಹಾಗೂ (ಮಾರ್ಕ 14:1, 2) ಪ್ರೀತಿಯ ನಡುವೆ ಒಂದು ಸಂಗತಿಯು ಅಡಕವಾಗಿತ್ತು. ಆತನು ತನ್ನ ಜೀವಮಾನಕಾಲವನ್ನೆಲ್ಲಾ ವ್ಯಯ ಮಾಡಿದ್ದರೂ, ಆತನನ್ನು ಯಾರೂ ಮೆಚ್ಚಿರಲಿಲ್ಲ. ಕಾರಣವೇನೆ ಇದ್ದರೂ ಯೇಸು ತನ್ನ ಸೇವೆಯ ಪ್ರಮುಖವಾದ ಸಂಗತಿಯನ್ನು ತೋರಸಲಿದ್ದನು.

"ಕರ್ತನ ಭೋಜನದ ನಂತರದಲ್ಲಿ" ಈ ಘಟನೆಯು ನೆಡದಿರಬಹುದು.[2] ಕರ್ತನ ಭೋಜನದ ಕುರಿತು ಈಗಾಗಲೇ ನಾವು ಕೇಳಲ್ಪಟ್ಟಿದ್ದೇವೆ; ಈಗ ನಾವು ಕರ್ತನ ಭೋಜನದ ನಂತರದ ವಿಚಾರವನ್ನು ಅರಿಯಬೇಕಾಗಿದೆ. ಇದು ಆತನ ಜ್ಞಾಪಕಾರ್ಥವಾಗಿದೆ. ಕರ್ತನ ಭೋಜನದ ಸಂದರ್ಭದಲ್ಲಿ, ಕರ್ತನು ಅದನ್ನು ನೇಮಿಸಿ, "ಇದನ್ನು ನನ್ನನ್ನು ನೆನಸಿ ಕೊಳ್ಳುವದಕ್ಕೋಸ್ಕರ ಮಾಡಿರಿ" ಅಂದನು (ಲೂಕ 22:19). ಕರ್ತನ ಭೋಜನದ ನಂತರ, "ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲೆಲ್ಲಿ ಸಾರಲಾಗುವದೋ ಅಲ್ಲಲ್ಲಿ ಈಕೆ ಮಾಡಿದ್ದನ್ನು ಸಹ ಈಕೆಯ ನೆನಪಿಗಾಗಿ ಹೇಳುವರೆಂದು, ಹೇಳಿದನು" (ಮಾರ್ಕ 14:9).

ಮರಿಯಳು ಯೇಸುವನ್ನು ಅಭಿಷೇಕಿಸಿದ ಸಂಗತಿಯೇ ಆ ಘಟನೆಯೆಂದು ಈಗ ನೀವು ಅರಿತ್ತಿದ್ದೀರಿ. ಇದು ಸುವಾರ್ತೆಯಲ್ಲಿನ ಪ್ರಮುಖವಾದ ಸುಂದರ ಕಥೆಯಾಗಿದೆ. ಆ ಸಂದರ್ಭವನ್ನು ಊಹೆಮಾಡಿ, ನಂತರ ಅದನ್ನು ಅಳವಡಿಸಿಕೊಳ್ಳೋಣ.[3] ಪ್ರಮುಖವಾಗಿ ಮಾರ್ಕನ ದಾಖಲೆಗಳನ್ನು ಪರಿಶೀಲಿಸಿ, ಯೋಹಾನನ ದಾಖಲೆಗಳನ್ನು ಗಮನಿಸೋಣ.[4]

### ದಾಖಲೆಗಳು

ಆತನು, "ಬೆಥಾನ್ಯದಲ್ಲಿ ಕುಷ್ಟರೋಗಿಯಾದ ಸೀಮೋನನ ಮನೆಯಲ್ಲಿರುವಾಗ ಎಂದು ಕಥೆ ಆರಂಭವಾಗುತ್ತದೆ ..." (ಮಾರ್ಕ 14:3ಎ). ಪಸ್ಕ ಹಬ್ಬಕ್ಕಾಗಿ ಯೇಸು ಆಗ ಯೆರೂಸಲೇಮಿಗೆ ಹೋಗಿದ್ದನು. ಯೋಹಾನನ ಪ್ರಕಾರ, ಹಬ್ಬದ "ಆರು ದಿನಗಳ" ಮೊದಲು (ಯೋಹಾನ 12:1). ಸಂಪ್ರದಾಯದಂತೆ, ಯೇಸು ಯೆರೂಸಲೇಮಿನಿಂದ ಕೆಲವಾರು ಮೈಲುಗಳ ಅಂತರದಲ್ಲಿದ್ದ ಚಿಕ್ಕ ಪಟ್ಟಣವಾದ ಬೆಥಾನ್ಯದಲ್ಲಿ ಇಳುಕೊಂಡಿದ್ದನು.

ಬೆಥಾನ್ಯದಲ್ಲಿ ಆತನು ಯಾವಾಗಲೂ ಮಾರ್ಥ, ಮರಿಯಳು ಹಾಗೂ ಲಾಜರನ ಮನೆಯಲ್ಲಿ ಇಳುಕೊಂಡಿದ್ದನು (ನೋಡಿ ಲೂಕ 10:38; ಯೋಹಾನ 11:1, 5; 12:1); ಆದರೆ ಈ ಸಂದರ್ಭದಲ್ಲಿ ಕುಷ್ಟರೋಗಿಯಾದ ಸೀಮೋನನ ಮನೆಯಲ್ಲಿದ್ದನು. ಒಂದು ವೇಳೆ ಅವನು ಆಹ್ವಾನ ಮಾಡಿರಬಹುದು. ಸೀಮೋನನು ಈಗ *ಪರಿಶುದ್ಧನಾಗಿದ್ದರೂ,* ಅಂಥವನ ಮನೆಯಲ್ಲಿ ಊಟಮಾಡುವದನ್ನು ಜನರು ಇಚ್ಚಿಸದೆ ಇರಬಹುದು (ಯೋಹಾನ 12:2); ಅವನು ಯೇಸುವಿನಿಂದ ಗುಣಹೊಂದಿರಬಹುದು. ಯೇಸುವಿನ ಸಂಗಡ ಪುನರುತ್ಥಾನ ಹೊಂದಿದ್ದ ಲಾಜರನೂ ಸಹ ಒಬ್ಬ ಅತಿಥಿಯಾಗಿದ್ದನು. (ಯೋಹಾನ 12:2; ನೋಡಿ ಲೂಕ

10:40); ಮರಿಯಳು (ಯೋಹಾನ 12:3); ಮತ್ತು ಶಿಷ್ಯರೂ ಇದ್ದರು (ಮತ್ತಾಯ 26:8).

ಈ ಚಿತ್ರಣವನ್ನು ಊಹೆ ಮಾಡಿಕೊಳ್ಳಿರಿ: ಅತಿಥಿಗಳು (ಮಾರ್ಕ 14:3ಬಿ) ಮುಂದೆ ಬಾಗಿ, ಎಡಗೈಯನ್ನು ಮೇಜಿನ ಮೇಲೆ ಇಟ್ಟು ಬಲಗೈಯಿಂದ ಊಟಮಾಡುತ್ತಿರಬಹುದು. ಹಬ್ಬದ ಸಮಯದಲ್ಲಿ ಸೀಮೋನನು ತನ್ನ ಸ್ವಸ್ಥತೆಯ ಬಗ್ಗೆ ಹೇಳಿರಬಹುದು, ಆದರೆ ಅಲ್ಲಿ ಲಾಜರನ ಸಾಕ್ಷಿ ಶ್ರೇಷ್ಟವಾಗಿರಬಹುದು. "ಮರಣದ ಪುನರುತ್ಥಾನದ ಬಗ್ಗೆ ನಾನು ನಿಮಗೆ ತಿಳಿಸುತ್ತೇನೆ!" ಎಂದು ಅವನು ಹೇಳಿರಬಹುದು. ಮರಣದ ಕತ್ತಲೆ ಹಾಗೂ ವೇದನೆಯನ್ನು ತಿಳಿಸಿರಬಹುದು.[5] ಆದರೆ ದೂರದಿಂದ ಒಂದು ಸ್ವರವು "ಲಾಜರನೇ ಹೊರಗೆ ಬಾ ಎಂಬ ಶಬ್ದ ಕೇಳಿದನು ಎಂದು ಸಹ ಹೇಳಿರಬಹುದು [ಯೋಹಾನ 11:43], ಆಗ ಅವನಲ್ಲಿ ಜೀವ ಬಂದಿರಬಹುದು!" ಅವನು ಸಮಾಧಿಯೊಳಗಿಂದ ಹೊರ ಬಂದ ದೃಶ್ಯದ ಬಗ್ಗೆ ನಗೆ ಉಂಟಾಗಿದ್ದರೂ, ಅವನು ಇನ್ನು ಸಹ ಸಾವಿನ ಬಟ್ಟೆಗಳನ್ನೆ ಸುತ್ತಿಕೊಂಡವನಾಗಿದ್ದನು. ಅದು ಎಂಥಹ ಸುಂದರವಾದ ಒಂದು ಸಾಯಂಕಾಲವಾಗಿರಬಹುದು!

ಈ ಎಲ್ಲಾ ಸಂಗತಿಗಳ ನಡುವೆ, ಮರಿಯಳು - ಇವುಗಳನ್ನು ಗಮನಿಸುತ್ತಿದ್ದಳು. ಅವಳು ಮಾರ್ಥಳಿಗೆ ಸಹಾಯ ಮಾಡಿದ್ದರೂ (ನೋಡಿ ಲೂಕ 10:40), ಅವಳು ಕ್ರಿಸ್ತನ ಮೇಲೆ ಕೇಂದ್ರೀಕೃತವಾಗಿದ್ದಳು. ಅವಳ ಹೃದಯವು ಪ್ರೀತಿಯಿಂದ ತುಂಬಿತ್ತು, ತನ್ನ ಸಹೋದರನಿಗೆ ಜೀವವನ್ನು ನೀಡಿದಾತನಿಗೆ ಕೃತಜ್ಞತೆ ಹೇಳಲು ಅವಳು ಅಲ್ಲಿದ್ದಳು. ಅವಳು ಮಾತನಾಡುವದರಲ್ಲಿ ಚತುರಳಲ್ಲದಿದ್ದರೂ, ಅವಳ ಅನುಭವ ಏನಾಗಿರಬಹುದು? ಅವಳಿಗೆ ಒಂದು ಆಲೋಚನೆ ಬಂದು: ಅವಳ ಪೆಟ್ಟಿಗೆಯಲ್ಲಿದ್ದ ವಿಶೇಷ ಭರಣಿಯ ನೆನಪಾಗಿರಬಹುದು. "ಅದು ಬಲು ಬೆಲೆಯುಳ್ಳ ಅಚ್ಚ ಜಟಮಾಂಸ ತೈಲದ ಭರಣಿಯಾಗಿತ್ತು" (ಮಾರ್ಕ 14:3; ಯೋಹಾನ 12:3).

ಅದನ್ನು[6] ಕೆಂಪು ಗುಲಾಬಿಯ ಅಂಟು ಹಾಗೂ ಎಣ್ಣೆ ಮಿಶ್ರಿತ ಸುಗಂಧದಿಂದ ಮಾಡಿದ್ದರು, ಈ ದ್ರವ್ಯವನ್ನು ದೂರದ ಭಾರತ ದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದರು. ಅದನ್ನು ಮೃತ ದೇಹದ ಸಂರಕ್ಷಣೆಗಾಗಿ ಬಳಸುತ್ತಿದ್ದರು.[7] ಮರಿಯಳು ಅದನ್ನು ಐಗುಪ್ತದಿಂದ ಅಮದು ಮಾಡಿಕೊಂಡಿದ್ದ ಬೆಲೆಯುಳ್ಳ ಬಿಳಿ ಕಲ್ಲಿನ ಭರಣಿಯಲ್ಲಿ ಶೇಖರಿಸಿ ಇಟ್ಟಿದ್ದಳು.

ಆಕೆ ಓಡಿಹೋಗಿ ಅದನ್ನು ತನ್ನ ಕೈಯಲ್ಲಿ ಹಿಡಿದು ಭೋಜನದ ಕೊಠಡಿಗೆ ತಂದಳು. ಮರಿಯಳು ಅದನ್ನು "ಒಡೆದಾಗ" ಅಲ್ಲಿ ಮೌನ ಅವರಿಸಿರಬಹುದು (ಮಾರ್ಕ 14:3). ನಂತರ ಅವಳು ಅದನ್ನು ಕರ್ತನ ತಲೆಯ ಮೇಲೆ ಹೊಯಿದ್ದಳು. ಆಕೆಯು ಅದರ ಮುಚ್ಚಳವನ್ನು ತೆರೆದು ಕೆಲವು ಹನಿಗಳನ್ನು ಸಿಂಪಡಿಸಿದ್ದರೆ ಅಲ್ಲಿ ಯಾರ ಆಕ್ಷೇಪಣೆಯೂ ಇರುತ್ತಿರಲಿಲ್ಲ (ನೋಡಿ ಲೂಕ 7:46), ಆದರೆ ಅವಳು ಭರಣಿಯನ್ನು ಒಡೆದು ಹಾಕಿದಳು.[8] ಅವಳು ತನ್ನ ಕೃತಜ್ಞತೆಯನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ.

ಮಾರ್ಕನ ಪ್ರಕಾರ, "ಆಕೆಯು ಕ್ರಿಸ್ತನ ತಲೆಯ ಮೇಲೆ ಹೊಯ್ದಳು" (ಮಾರ್ಕ 14:3), ಆದರೆ ಆಕೆ ಆತನ ಪಾದಕ್ಕೆ ಹಚ್ಚಿದಳು ಎಂದು ಯೋಹಾನನ ಹೇಳಿಕೆಯಿದೆ (ಯೋಹಾನ 12:3ಎ). ಆದರೆ ನಾವುಗಳು "ತಲೆಯಿಂದ ಪಾದದವರೆಗೆ ಅಭಿಷೇಕ" ಎಂದು ಹೇಳಬಹುದು. ನಂತರ ಆಕೆ, "ಆತನ ಪಾದಗಳನ್ನು ತನ್ನ ತಲೆ ಕೂದಲಿನಿಂದ ಒರೆಸಿದಳು; ಆ ತೈಲದ ಪರಿಮಳವು ಮನೆಯಲೆಲ್ಲಾ ತುಂಬಿಕೊಂಡಿತು" (ಯೋಹಾನ 12:3ಬಿ).[9]

ಆಗ ಆಕೆಯ ಈ ಕಾರ್ಯದ ನಿಮಿತ್ತ ಮೌನವಾಗಿದ್ದವರು ತಮ್ಮ ಬಾಯಿಗಳಿಂದ:

> ಆದರೆ ಕೆಲವರು ತಮ್ಮೊಳಗೆ ಕೋಪಗೊಂಡು - ಈ ತೈಲವನ್ನು ನಷ್ಟಮಾಡಿದ್ದೇಕೆ? ಇದನ್ನು ಮುನ್ನೂರು ಹಣಕ್ಕಿಂತ ಹೆಚ್ಚು ಬೆಲೆಗೆ ಮಾರಿ[10] ಬಡವರಿಗೆ ಕೊಡಬಹುದಾಗಿತಲ್ಲಾ ಎಂದು ಹೇಳಿ ಆಕೆಗೆ ಛೀ ಹಾಕಿದರು (ಮಾರ್ಕ 14:4, 5).

ಯೋಹಾನನ ಪ್ರಕಾರ ಆ ಟೀಕೆಯು ಯೂದನಿಂದ ಆರಂಭವಾಯಿತು (ಯೋಹಾನ 12:4, 5).

ಆ ದಿನಗಳಲ್ಲಿ ಅದು ಒಬ್ಬ ಸಾಮಾನ್ಯ ಮನುಷ್ಯನ ಕೂಲಿಯಾಗಿತ್ತು (ಮತ್ತಾಯ 20:2). ಮುನ್ನೂರು ಹಣವು ಒಂದು ವರ್ಷದ ಕೂಲಿಯಾಗಿತ್ತು.[11] ಹೇಗೂ ಆ ಅಭಿಷೇಕವು ಸಾವಿರಾರು ರೂಪಾಯಿ ಮೌಲ್ಯದ ಬೆಲೆಯುಳ್ಳದ್ದಾಗಿತ್ತು![12] ಆದರೆ ಟೀಕಾಕಾರರಿಗೆ ಇದು ದೊಡ್ಡ ನಷ್ಟವಾಗಿತ್ತು.

ಕರ್ತನು ಈ ವಿಚಾರವನ್ನು ಒಪ್ಪುವನೆಂದು ಅವರು ಭಾವಿಸಿದ್ದರು. ಯಾಕಂದರೆ ಆತನು ಸರಳವಾದ ಜೀವಿತವನ್ನು ಜೀವಿಸುತ್ತಿದ್ದನು. ವ್ಯರ್ಥ ಮಾಡುವದನ್ನು ಆತನು ಒಪ್ಪುತ್ತಿರಲಿಲ್ಲ.[13] ಬಡವರಿಗೆ ಸಹಾಯ ಮಾಡಲು ಆತನು ಪ್ರೋತ್ಸಾಹಿಸಿದನು.[14] ಆದಲಿಂದ ಯೇಸು ಆಕೆಯನ್ನು ಖಂಡಿಸುವನೆಂದು ತಿಳಿದಿದ್ದರು. ಅದರ ಬದಲು ಆತನು ಆಕೆಯನ್ನು ಮೆಚ್ಚಿಕೊಂಡನು:

> ಆದರೆ ಯೇಸು - ಈಕೆಯನ್ನು ಬಿಡಿರಿ. ಈಕೆಗೆ ಯಾಕೆ ತೊಂದರೆಕೊಡುತ್ತೀರಿ? ಈಕೆ ನನಗೆ ಒಳ್ಳೆಯ ಕಾರ್ಯವನ್ನು ಮಾಡಿದ್ದಾಳೆ. ಬಡವರು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುತ್ತಾರೆ;[15] ನಿಮಗೆ ಮನಸ್ಸು ಬಂದಾಗ ಅವರಿಗೆ ಉಪಕಾರಮಾಡಬಹುದು; ಆದರೆ ನಾನು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುವದಿಲ್ಲ.[16] ಈಕೆಯು ತನ್ನ ಕೈಲಾಗುವಷ್ಟು ಮಾಡಿದ್ದಾಳೆ; ಈಕೆಯು ಮುಂದಾಗಿ ನನ್ನ ಉತ್ತರಕ್ರಿಯೆಗೋಸ್ಕರ ನನ್ನ ದೇಹಕ್ಕೆ ಈ ತೈಲವನ್ನು ಹಚ್ಚಿದ್ದಾಳೆ (ಮಾರ್ಕ 14:6-8).

ಅವರು ಅರಿಯದ ಅಂಶವನ್ನು ಯೇಸು ತಿಳಿದಿದ್ದನು: ಈಗ ಆತನ ಸಮಯವು ಹತ್ತಿರ ವಾಗಿತ್ತು (ಯೋಹಾನ 12:23; 13:1; 17:1). ಇನ್ನು ಕೆಲವೇ ದಿವಸಗಳಲ್ಲಿ ಆತನು ಕ್ರೂಜೆಗೆ ಏರುವವನಿದ್ದನು. ಒಂದು ವೇಳೆ ಮರಿಯಳು ತಾನು ಮಾಡಿದ ಕೃತ್ಯದ ಕಾರಣವನ್ನು ಅರಿಯದೆ ಇರಬಹುದು. ಆದರೆ ಅವಳು ಪ್ರೀತಿಯ ಕೃತಜ್ಞತೆಯ ಕ್ರಿಯೆಯನ್ನು ಮಾಡಿ ಮುಗಿಸಿದ್ದಳು. ಆದರೆ ಯೇಸು ಅದರಲ್ಲಿ ಒಂದು ಗುರುತರ ಅಂಶವನ್ನು ಕಂಡನು: ಆಕೆಯು ಆತನ ದೇಹ ವನ್ನು ಹೂಣಿಡಲು ಸಿದ್ಧಪಡಿಸಿದ್ದಳು.

ಯೇಸುವಿನ ಮರಣ ಹಾಗೂ ಹೂಣಿಡುವಿಕೆಯ ಮೊದಲ ಅಂಶವನ್ನು ಗಮನಿಸಿ. ಸಬ್ಬತ್ ಆರಂಭವಾಗುವ ಕೆಲವು ಗಂಘೆಗಳ ಮುನ್ನ ಆತನು ಸತ್ತನು (ಲೂಕ 23:54). ಅರಿಮಥಾಯದ ಯೋಸೇಪನು ಆತನ ದೇಹವನ್ನು ಸಮಾಧಿಗೆ ಒಯ್ದನು. ಅವನ ಹಾಗೆ ನಿಕೋದೇಮನು ಈ ಕಾರ್ಯವನ್ನು ತುರ್ತಾಗಿ ಮಾಡಿದ್ದರಿಂದ, ಆತನ ದೇಹವನ್ನು ಸಿದ್ಧಪಡಿಸಲು ಸಮಯವಿರಲಿಲ್ಲ.[17] ಆದ್ದರಿಂದ ಕೆಲವು ಸ್ತ್ರೀಯರು ಆತನ ಹಿಂದೆಹೋಗಿ "ಪರಿಮಳ ದ್ರವ್ಯಗಳನ್ನು ಹಾಗೂ ಸುಗಂಧ ತೈಲವನ್ನು ಸಿದ್ಧಮಾಡಿಕೊಂಡು" (ಲೂಕ 23:56), ಸಬ್ಬತ್ತಿನ ಮುಂಚೆ ಆ ಕಾರ್ಯವನ್ನು ಪೂರ್ಣ ಮಾಡಲು ಯತ್ನಿಸಿದ್ದರು (ಲೂಕ 24:1). ಹೇಗೂ ಅವರು ಸಮಾಧಿಯ ಬಳಿ ಬರಲು ಅಲ್ಲಿ ಆತನ ದೇಹವಿರಲಿಲ್ಲ (ಲೂಕ 24:2, 3). ಆತನು ಎದ್ದು ಬಂದಿದ್ದನು (ಲೂಕ 24:6). ಸಬ್ಬತ್ತಿನ ಮುಂಚೆ ಅಥವಾ ನಂತರ ಆತನ ದೇಹವನ್ನು ಸಿದ್ಧಪಡಿಸಲು ಸಮಯವಿರಲಿಲ್ಲ, ಆದರೆ ಅದು ಸಮಂಜಸವಿಲ್ಲ. ಮರಿಯಳು ಈ ಮೊದಲೇ ಆತನ ದೇಹವನ್ನು ಸಿದ್ಧಪಡಿಸಿದ್ದಳು.

ಅಂತಿಮವಾಗಿ ಕರ್ತನು, "ಸುವಾರ್ತೆಯು ಸರ್ವಲೋಕದಲ್ಲಿ[18] ಎಲ್ಲೆಲ್ಲಿ ಸಾರಲಾಗುವದೋ ಅಲ್ಲಲ್ಲಿ ಈಕೆ ಮಾಡಿದ್ದನ್ನು ಸಹ ಈಕೆಯ ನೆನಪಿಗಾಗಿ ಹೇಳುವರೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು" (ಮಾರ್ಕ 14:9). ಸುವಾರ್ತೆಯು ಅನೇಕ ಕಡೇ ತಲುಪಿದೆ, ಮರಿಯಳು ಪ್ರೀತಿಯಿಂದ ನೀಡಿದ ಕಾಣಿಕೆಯ ಬಗ್ಗೆ ಜನರು ಅರಿತ್ತಿದ್ದಾರೆ. ಆಕೆಯು ಒಡೆದ ಭರಣಿಯು ಸುವಾಸನೆಯು ಬೇಥಾನ್ಯದ ಒಂದು ಮನೆಗೆ ಮಾತ್ರ ಸಿಮೀತವಾಗಿರದೇ, ಇಡೀ ಪ್ರಪಂಚವನ್ನೇ ಆವರಿಸಿದೆ.

## ಅಳವಡಿಕೆ

ಈ ಕಥೆಯಿಂದ, ಯಾವ ಪಾಠವನ್ನು ಕಲಿತ್ತಿದ್ದೇವೆ? ಇದರಲ್ಲಿ ಮೂರು ಸಲಹೆಗಳಿವೆ.[19] ಈ ಪ್ರತಿಯೊಂದರಲ್ಲಿ ಒಂದೊಂದು ವಿಶೇಷತೆಗಳಿವೆ.

**ಪ್ರೀತಿಯು ಹಣಕಾಸಿನ ಅಂತಿಮವನ್ನು ತಿಳಿದಿರುತ್ತದೆ**

ಪ್ರೀತಿಸುವವರು ಹಣಕಾಸಿನಲ್ಲಿರುವ ಮಿತವ್ಯಯದ ಹತೋಟಿ ಏನು ಎಂದು ಅರಿತ್ತಿದ್ದಾರೆ. ಇದರಲ್ಲಿ ಭಿನ್ನಾಭಿಪ್ರಾಯವಿರಬಹುದು: *ಮಿತವ್ಯಯದಲ್ಲಿ* ಯಾವ ಹತೋಟಿ ಇರಬಹುದು? ಹತೋಟಿ ಇಲ್ಲದೆ ಇರಬಹುದು. ಆದರೆ ಪ್ರೀತಿಯನ್ನು ತೋರಬಹುದಾಗಿದೆ.

ನಾನು ಹೇಳುವುದನ್ನು ಅರ್ಥಮಾಡಿಕೊಳ್ಳಬೇಕೆಂದರೆ, ಈ ಕಥೆಯಲ್ಲಿರುವ ಎರಡು ಅಂಶಗಳನ್ನು ಗಮನಿಸಿ: ಮರಿಯಳು ಹಾಗೂ ಯೂದ.[20] ಅವರಿಬ್ಬರೂ ಸಹ ಯೇಸುವಿನ ಶಿಷ್ಯರಾಗಿದ್ದರು. ಅವರು ಯೇಸುವಿನೊಂದಿಗೆ ಮಾತಾಡಿ, ಯೇಸುವಿನ ಮಾತನ್ನು ಕೇಳಿದ್ದಳು. ಆದರೆ ಅವರ ನಡುವೆ ಎರಡು ವ್ಯತ್ಯಾಸಗಳಿವೆ: ಒಬ್ಬರು ಆತನನ್ನು ಪ್ರೀತಿಸಿದರೆ, ಇನ್ನೊಬ್ಬರು ಪ್ರೀತಿಸಲಿಲ್ಲ. ಆದ್ದರಿಂದ ಒಬ್ಬರಿಗೆ, ಖರ್ಚು ಮಾಡುವಂಥದ್ದು ಪ್ರೀತಿಯಾದರೆ, ಇನ್ನೊಬ್ಬರಿಗೆ ಅದು ವ್ಯರ್ಥವಾಗಿತ್ತು.

*ಅದು* ವ್ಯರ್ಥವೇ? ಮರಿಯಳು ಆ ತೈಲದಿಂದ ಇನ್ನೇನನ್ನು ಮಾಡಬಹುದಿತ್ತು? ಅವಳ ಟೀಕಾಕಾರರ ಪ್ರಕಾರ, ಅದನ್ನು ಆಕೆಯು ಮಾರಿ, ಬಡವರಿಗೆ ಕೊಡಬಹುದಿತ್ತು. “ಬಡವರನ್ನು ಸಂರಕ್ಷಿಸಬೇಕು” (ಗಲಾತ್ಯ 2:10) ಎಂದು ಹೇಳಿರುವದರಿಂದ ಅದು ಘನ ಕ್ರಿಯೆಯಾಗಿತ್ತು. ಆದರೆ ಅದರಲ್ಲಿರುವ ಅಂತ್ಯದ ಫಲಿತಾಂಶವೇನು? ಆದರೆ “ಬಡವರು” ಯಾವಾಗಲೂ ನಮ್ಮ ಬಳಿ ಇರುತ್ತಾರೆ ಎಂದು ಯೇಸು ಹೇಳಿದನು. ಅವಳು ಅದನ್ನು ತನ್ನ ಕುಟುಂಬಕ್ಕಾಗಿ ಇಟ್ಟುಕೊಳ್ಳಬಹುದಾಗಿತ್ತು. ನಮ್ಮಲ್ಲಿ ಕೆಲವರು ಇಂಥಹ ಕಾರಣಗಳನ್ನೇ ನೀಡುತ್ತೇವೆ: ನನಗೆ ಅನೇಕ ಕೊರತೆಗಳು ಇರುವಾಗ, ನನ್ನಲ್ಲಿರುವದನ್ನು ಏಕೆ ಕೊಡಲಿ? ಪಕ್ಕದ ಮನೆಯ ನೈಮನ್ನನಿಗೆ ಒಂದು ಹೊಸ ರಥವಿದೆ, ಆದರೆ ನನ್ನದು ಮೂರು ವರ್ಷ ಹಳೆಯದಾಗಿದೆ. ನನಗೆ ಹೊಸ ರಥ ಬೇಕಾಗಿದೆ! ಹೌದು ಆಕೆಯು ತನ್ನ ಭರಣಿಯನ್ನು ಕಪಾಟಿನಲ್ಲೇ ಇಟ್ಟಿದ್ದರೆ ಅದರಿಂದ ಯಾರಿಗೂ ಪ್ರಯೋಜನವಾಗುತ್ತಿರಲಿಲ್ಲ. ಈ ಕಾರಣಗಳಿಗಾಗಿ ಅದನ್ನು ನೀಡಲು ಅವಳು ಮನಸ್ಸು ಮಾಡಿದ್ದರೆ, ಅದು ಲೋಕದಲ್ಲಿ ಅತಿ ಚಿಕ್ಕದಾದ ಕ್ರಿಯೆಯಾಗುತ್ತಿತ್ತು. ನಿಸ್ವಾರ್ಥ ಪ್ರೀತಿಯ ಬಗ್ಗೆ ನಾವ್ಯಾರು ಸಹ ಅರಿಯಲು ಸಾಧ್ಯವಾಗುತ್ತಿರಲಿಲ್ಲ.

ನಿಮ್ಮ ಜೀವತದಲ್ಲಾದ ಒಂದು ವಿಶೇಷ ಘಟನೆಯ ಕುರಿತು ಒಂದು ಕ್ಷಣ ಯೋಚಿಸಿ, ಅದರ ಬಗ್ಗೆ ಮನಸ್ಸಿನಲ್ಲಿ ಏನಾದರು ಇದೆಯೇ? ಅದನ್ನು ಇತರರ ಮುಂದೆ ಹೇಳಲು ಸಾಧ್ಯವಿರದೆ ಇರಬಹುದು: “ಅದು ಆಸ್ತಿಯ, ಅಥವಾ ವ್ಯಾಪಾರದ ಅಥವಾ ಹಸುವಿನ ಮಾರಾಟ ಕುರಿತಾಗಿರಬಹುದು.” ನಾನು ಆ ಹಣವನ್ನೆಲ್ಲಾ ಬಡ್ಡಿ ಪಡೆಯಲು ಬ್ಯಾಂಕಿನಲ್ಲಿ ಇಟ್ಟಿರಬಹುದು! “ಆ ಸಮಯದಲ್ಲಿ, ನಿಮಗೆ ಹತ್ತಿರವಾದವರು; ನೀನು ಈ ಕೃತ್ಯವನ್ನು ಮಾಡಬಾರದಿತ್ತು”[21] ಎಂದು ಹೇಳಿರಬಹುದು.

ನಿಮ್ಮಲ್ಲಿ ಕೆಲವರು ನಿಮ್ಮ ಮಕ್ಕಳಿಗೆ ಶಾಲೆಗೆ ಕಳುಹಿಸಲು ಬೆಲೆಯುಳ್ಳ ಭರಣಿಯನ್ನು ಒಡೆದಿರಬಹುದು,[22] ಆದಿಯಲ್ಲಿ ದೇವರ ಸಭೆ ಸ್ಥಾಪನೆಗಾಗಿ, ತಮ್ಮ ಭರಣಿಗಳನ್ನು ದೇವರ ಜನರು ಒಡೆದಿದ್ದರು. ಅದು ತ್ಯಾಗವಾಗಿತ್ತು.[23] ಆದ್ದರಿಂದ ಅನೇಕ ಜೀವಿತಗಳಿಗೆ ಆಶೀರ್ವಾದ ಉಂಟಾಯಿತು.

**ಪ್ರೀತಿ ಇಲ್ಲದ ಸ್ವಭಾವವು ಅದನ್ನು ವ್ಯರ್ಥ ಎಂದು ಪರಿಗಣಿಸುತ್ತದೆ**

ಪ್ರೀತಿ ಇರುವವರು ಇಂಥ ಕಾರ್ಯ ದುರುಪಯೋಗವಲ್ಲವೆಂದು ತಿಳಿದಿರುತ್ತಾರೆ. ಆದರೆ ಪ್ರೀತಿ ಇಲ್ಲದವರಿಗೆ ಇದು ಅಸಾಧ್ಯ. ಅಂಥವರ ಪ್ರೀತಿಯು ವ್ಯರ್ಥವಾದ

ತೋರಿಕೆಯಾಗಿದೆ. ಅಂಥಹ ಕಾಣಿಕೆಗಳ ಸಾಮರ್ಥ್ಯವನ್ನು ಅವರು ಅರಿಯುವರು.

ಯೋಹಾನನು ಟೀಕಾಕಾರರ ಮನಸ್ಸಿನ ಸಿದ್ಧಾಂಥದ ಕುರಿತು ಈ ಹೇಳಿಕೆ ನೀಡಿರುವನು:

> ಆದರೆ ಆತನ ಶಿಷ್ಯರಲ್ಲಿ ಒಬ್ಬನು, ಅಂದರೆ ಆತನನ್ನು ಹಿಡುಕೊಡುವದಕ್ಕಿದ್ದ ಇಸ್ಕರಿಯೋತ ಯೂದನೆಂಬವನು - ಯಾಕೆ ಈ ತೈಲವನ್ನು ಮುನ್ನೂರು ಹಣಕ್ಕೆ ಮಾರಿ ಬಡವರಿಗೆ ಕೊಡಲಿಲ್ಲ ಅಂದನು. ಅವನು ಬಡವರಿಗೋಸ್ಕರ ಚಿಂತಿಸಿ ಇದನ್ನು ಹೇಳಲಿಲ್ಲ; ಅವನು ಕಳ್ಳನಾಗಿದ್ದು ತನ್ನ ವಶದಲ್ಲಿದ್ದ ಅವರ ಹಣದ ಚೀಲದಲ್ಲಿ ಹಾಕಿದ್ದನ್ನು ತಕ್ಕೊಳ್ಳುವವನಾಗಿದ್ದದರಿಂದಲೇ ಹೇಳಿದನು (12:4-6).

ಯೂದನ ಬಡವರ ಕುರಿತು ಚಿಂತನೆ ಹೊಂದಿರಲಿಲ್ಲ. ಆ ಜಟಮಾಂಸಿ ತೈಲವನ್ನು ಮಾರಿ ತನ್ನ ಚೀಲದಲ್ಲಿ, ತನ್ನ ವಶಕ್ಕೆ ಪಡೆಯಲು ಬಯಸಿದನು. ಮರಿಯಳು ಮಾಡಿದ್ದು ವ್ಯರ್ಥ ಎಂದು ಯೂದನು ಭಾವಿಸಿದನು!

ಯೂದನು ಮನೋಭಾವನೆ ತಪ್ಪು ಎಂದು ಹೇಳುವ ಸಕಲ ಟೀಕಾಕಾರರ ಕುರಿತು ನಾವು ಹೇಳದೆ ಇದ್ದರೂ, ಒಬ್ಬನು ಸ್ವಾರ್ಥಿಯಾಗಿರುವದಾದರೆ, ಅವನು ಇತರರು ಮಾಡುವ ಇಂಥಹ ಕಾರ್ಯವನ್ನು ನೋಡಿ ಅದು ವ್ಯರ್ಥವೆಂದು ಹೇಳುತ್ತಾನೆ. ನಾನು ಅಭಿಲೇನ್ ಕ್ರಿಶ್ಚಿಯನ್ ಕಾಲೇಜಿಗೆ (ಈಗ ಯೂನಿವರ್ಸಿಟಿ) ಸೇರಿದಾಗ ಜೋ, ಗೆ ಒಂದು ಎಂಗೇಜ್‌ಮೆಂಟ್ ಉಂಗುರವನ್ನು ಕೊಂಡುತಂದೆನು. ಅದು ಬಹಳ ಬೆಲೆವುಳ್ಳದ್ದಾಗಿರದೇ ಇದ್ದರೂ, ನಾನು ಹೊಂದಿದ್ದ ಹಣದಲ್ಲಿ ಅರ್ಧವನ್ನು ಅದಕ್ಕಾಗಿ ವ್ಯಯ ಮಾಡಬೇಕಾಯಿತು. ಹಣದ ಬಡತನ ಹಾಗೂ ಕೊರತೆಯ ನಡುವೆ, ನಾನು ಇದನ್ನು ಕೊಂಡುಕೊಂಡದ್ದು ವ್ಯರ್ಥವೆಂದು ಕೆಲವರು ಭಾವಿಸಬಹುದು. ಆದರೆ, ನಾನು ಒಂದು ಉತ್ತಮವಾದದ್ದರ ಮೇಲೆ ಹಣವನ್ನು ಖರ್ಚು ಮಾಡಿದ್ದೆನು.

ಸಮಾಜದಲ್ಲಿ ಪ್ರೀತಿ ಇಲ್ಲದವರು, ಇಂಥಹ ಪ್ರೀತಿಯ ತೋರ್ಪಡುವಿಕೆಯನ್ನು ವ್ಯರ್ಥ ಎನ್ನಬಹುದು. ಕರ್ತನ ಸೇವೆಯಲ್ಲೂ ಸಹ ಇದೇ ಅರ್ಥವಿರುತ್ತದೆ. ಲಾಸ್ ಎಂಜಲಿಸ್‌ನಲ್ಲಿದ್ದ ಒಬ್ಬ ಸ್ತ್ರೀ ವಾರದಿಡೀ ಸೋಮಾರಿಯಾಗಿದ್ದರೂ, ಆರಾಧನೆಯನ್ನು ಎಂದಿಗೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಆಕೆಯ ಸ್ನೇಹಿತರಲ್ಲಿ ಒಬ್ಬರು, "ನಿನಗೆ ಮರಣವು ಸಮೀಪಿಸುವಾಗ" ಅದು ಸಭೆಗೆ ಹೋಗುವ ಸಮಯವಾಗಿದ್ದರೆ, ನೀನು ಮರಣದಿಂದ ಎದ್ದು ಹೋಗುತ್ತೀ ಎಂದು ಹೇಳುತ್ತಿದ್ದರು![24]

ಓಕ್ಲಾಹೋಮದ ಒಬ್ಬ ವ್ಯಾಪಾರಿಯು ಸಭೆಗೆ ಉದಾರವಾಗಿ ಕಾಣಿಕೆಗಳನ್ನು ನೀಡುತ್ತಿದ್ದನು. ಅವನ ಹಣದ ಲೆಕ್ಕಾಚಾರ ಬರೆಯುವವನು, "ಅವನಿಗೆ ಸರ್ಕಾರವು ನೀಡಿರುವ ಮಿತಿಯನ್ನು ಮೀರಿ ನೀನು ನೀಡುತ್ತಿರುವೆ. ನೀನು ಸರ್ಕಾರವು "ಮಿತಿಗೊಳಿಸಿರುವಷ್ಟನ್ನೇ" ಕಾಣಿಕೆ ನೀಡ ಬೇಕು ಎಂಬ ಸಲಹೆಯನ್ನು ನಾನು ನೀಡುತ್ತೇನೆ ಅಂದನು. ಆಗ ಆ ಸಹೋದರನು ಉತ್ತರಿಸಿ, "ನಾನು ಪ್ರೀತಿಯ ನಿಮಿತ್ತವಾಗಿ ನೀಡುತ್ತಿದ್ದೇನೆ ವಿನಃ" ಕಡಿತವನ್ನಲ್ಲಾ ಅಂದನು. ಕರ್ತನ ಮೇಲೆ ಆಳವಾದ ಪ್ರೀತಿಯನ್ನು ಇಡದವನು, ಪ್ರೀತಿಯ ಅಧಿಕ ತೋರಿಕೆಯು ಅವನಿಗೆ ವ್ಯರ್ಥ ಹಾಗೂ ಮೂರ್ಖತನವಾಗಿದೆ.

**ಪ್ರೀತಿಯು ಅವಕಾಶವನ್ನು ಸದುಪಯೋಗಪಡಿಸಿಕೊಡುತ್ತದೆ**

ಅಂತಿಮ ಪಾಠವು ಪ್ರಮುಖವಾಗಿದೆ: ಸತ್ಯವಾದ ಪ್ರೀತಿಯು, ತನ್ನನ್ನು ಅಧಿಕವಾಗಿ ತೋರ್ಪಡಿಸಿಕೊಳ್ಳುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುತ್ತದೆ. ಅಂಥಹ ಅವಕಾಶವನ್ನು ಒಂದು ಸಾರಿ ಕಳಕೊಂಡರೆ, ಅದು ಪುನಃ ಬರಲಾರದು.

"ತನ್ನ ಹೂಣಿಡುವಿಕೆಗಾಗಿ" ಮರಿಯಳು ತನ್ನ ದೇಹವನ್ನು ಅಭಿಷೇಕಿಸಿದಳು ಎಂದು

ಯೇಸು ಹೇಳಿದನು (ಮಾರ್ಕ 14:8). ಆಕೆಯು ಆ ಭರಣಿಯನ್ನು ತರುವಾಗ ಎರಡನೇ ಆಲೋಚನೆ ಹೊಂದಿದ್ದರೆ? ಮಾರ್ಥಳಿಗೆ ನಾನು ಎನ್ನೆಂದು ಹೇಳಲಿ" ಎಂದು ನೆನಸಿದ್ದರೆ ಏನಾಗುತ್ತಿತು? ಅಥವಾ ಮಾರ್ಥಳ ಬಳಿ ಹೋಗಿ ಈ ಭರಣಿಯ ವಿಚಾರವನ್ನು ಹೇಳಿದ್ದರೆ, ಆಕೆ ಏಕೆ ಈ "ವ್ಯರ್ಥ" ಎಂದು ಹೇಳಿ, ಇನ್ನೊಂದು ಭರಣಿಯನ್ನು ಬದಲು ಮಾಡಬಹುದಿತ್ತೇ? "ಈ ಸಮಯವು ಮುಗಿದ ನಂತರ ಮಾರ್ಥ, ಲಾಜರ ಹಾಗೂ ನಾನು ಈ ಭರಣಿಯ ಕುರಿತು ಚಿಂತನೆ ಮಾಡಬಹುದಲ್ಲವೇ ನನ್ನಹಾಗೆ ಅವರೂ ಸಹ ಭಾವಿಸಬಹುದಲ್ಲವೇ. ನಂತರ ಹಬ್ಬದ ಸಮಯದಲ್ಲಿ ಆ ಕಾಣಿಕೆಯನ್ನು ಆತನಿಗೆ ನೋಡುವ ನಿರ್ಧಾರವನ್ನು ಮಾಡಿರಬಹುದಲ್ಲವೆ. " ಆಕೆಯು ಶಿಲುಬೆಯ ಮುಂದೆ ನಿಂತಿರುವಾಗ ಈ ಒಂದು ಅವಕಾಶವನ್ನು ಕಳಕೊಂಡಿದ್ದಕ್ಕೆ ಆಕೆಯು ಎಷ್ಟು ಬೇಸರ ಪಡುತ್ತಿದ್ದಳಲ್ಲವೇ?

ನಮ್ಮಲ್ಲಿ ಕೆಲವರು ನಮ್ಮ ಭರಣಿಗಳನ್ನು ಮುಟ್ಟದಂತೆ, ಮುರಿಯದಂತೆ, ನಮಗೋಸ್ಕರ ಸುರಕ್ಷಿತವಾಗಿ ಇಟ್ಟುಕೊಂಡಿದ್ದೇವೋ? ಆದರೆ ಪ್ರೀತಿಯ ತೋರ್ಪಡಿಕೆಯನ್ನು ತೋರದೆ ನನ್ನ ಅವಕಾಶವನ್ನು ಕಳಕೊಂಡೆನು ಎಂದು ಮರುಗುವವರಾಗಿದ್ದೇವೋ? ನಾನು ತೀರ್ಪು ಮಾಡುವವನಲ್ಲಾ, ಆದರೆ ನಾನು ನೂರಾರು ಶವ ಸಂಸ್ಕಾರವನ್ನು ನೋಡಿದ್ದೇನೆ, ಅಯ್ಯೋ "ನಾನು ಪ್ರೀತಿಸಲಿಲ್ಲ," ಅಥವಾ "ಒಪ್ಪಿಕೊಳ್ಳಲಿಲ್ಲ" ಅವಕಾಶವನ್ನು ಕಳಕೊಂಡೆ ಎಂಬ ಅನೇಕರ ಕಣ್ಣೀರನ್ನು ನಾನು ನೋಡಿದ್ದೇನೆ.

ಈ ಸಂಗತಿಯನ್ನು ಆಲೋಚಿಸಿ: ನಮ್ಮ ಭರಣಿಗಳು, ಸಮಯ, ತಲಾಂತುಗಳು, ಶಕ್ತಿ, ಹಾಗೂ ಸ್ವಾಸ್ತ್ಯಗಳು, ಉಪಯೋಗವಾಗಿರದೆ ಇರುವ ಸಂದರ್ಭದಲ್ಲಿ ಕರ್ತನು ಬರುವದಾದರೆ, ಅವುಗಳ ಬೆಲೆಯು ಕುಸಿದು ಹೋಗುವದಿಲ್ಲವೇ.

## ಮುಕ್ತಾಯ

ನೀವು ನನ್ನನ್ನು ಅರಿತಿರುವದಾದರೆ, ನಾನು ನೀವುಗಳು "ವ್ಯರ್ಥ" ಮಾಡಿರಿ ಎಂಬ ಸಲಹೆಯನ್ನು ನೀಡುತ್ತಿರುವದಿಲ್ಲ. ನಿನ್ನಲ್ಲಿ ಇರದ ಹಣವನ್ನು ವ್ಯಯಮಾಡು ಎಂದು ಶಿಫಾರಸ್ಸು ಮಾಡುತ್ತಿರುವದಿಲ್ಲ. ಅಧಿಕವಾಗಿ ವ್ಯಯಮಾಡುವಂಥ ಒಂದು ಸಮಯ ಹಾಗೆ ಅವಕಾಶವಿದೆ. ವಿಲಿಯಮ್ ಬಾರ್ಕ್ಲೆಯವರು ಬರೆದು, "ಪ್ರೀತಿಯು ಲೆಕ್ಕಾಚಾರ ಮಾಡುವದಿಲ್ಲ. ಅಲ್ಪವಾದದ್ದನ್ನು ಗೌರವಪೂರ್ವಕವಾಗಿ ಹೇಗೆ ನೀಡಲಿ ಎಂದು ಯೋಚಿಸುವದಿಲ್ಲ; ಅದು ಮಿತಿಮೀರಿ ನೀಡುತ್ತದೆ, ಕೊಡುವಂಥದ್ದನ್ನು ಕೊಟ್ಟ ನಂತರ, ನಾನು ಕೊಟ್ಟದ್ದು ಅಲ್ಪವೆಂದು ಪ್ರೀತಿಯು ಪರಿಗಣಿಸುತ್ತದೆ."[25]

ಪ್ರೀತಿಯು ತೀವ್ರವಾದದನ್ನು[26] ಅನೇಕ ನಿದರ್ಶನಗಳನ್ನು ನೀಡಬಹುದಾಗಿದೆ. ಮಹಾ ನಿದರ್ಶನ ದೇವರು ನೀಡಿರುವ ವರವೇ (ಯೋಹಾನ 3:16). ನಾನು ಮಾಡಿರುವದನ್ನೇ ನೀವುಗಳು ಮಾಡಿರಿ ಎನ್ನುತ್ತಾನೆ (ಲೂಕ 10:37).

ಪಶ್ಚಾತ್ತಾಪ ಪಟ್ಟ ವ್ಯಕ್ತಿಯಾದ ನಿನ್ನ ನಂಬಿಕೆಯನ್ನು ಅರಿಕೆ ಮಾಡಿ, ದೀಕ್ಷಾಸ್ನಾನಕ್ಕಾಗಿ ಆಹ್ವಾನವನ್ನು ನಿನಗೆ ನೀಡುತ್ತೇನೆ (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38). ನೀನು ತಪ್ಪಿಹೋಗಿದ್ದರೆ, ಪುನಃ ಹಿಂದಿರುಗಿ ಬಾ (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9). ಕರ್ತನಿಗೆ ವಿಧೇಯನಾಗು ಅದು ಪ್ರಮುಖವಾದದ್ದು (ಇಬ್ರಿಯ 5:8, 9). ಕ್ರಿಸ್ತನ ಮೇಲಿನ ಪ್ರೀತಿಯ ನಿಮಿತ್ತ ಅದನ್ನು ಮಾಡು (ಯೋಹಾನ 14:15; 1 ಯೋಹಾನ 5:3).

ಟಿಪ್ಪಣಿಗಳು

[1]ಈ ಎಲ್ಲಾ ಸಾಮ್ಯಗಳು William S. Banowsky ರಚನೆಗಳಲ್ಲಿವೆ, "Breaking Alabaster Boxes," *Sermons of William S. Banowsky,* Great Preachers of Today series, vol. 11, ed. J. D. Thomas (Abilene, Tex.: Biblical Research Press, 1967), 20-27. [2]Ibid., 20. ಪಸ್ಕ ಹಬ್ಬದ ದಿನದ ಊಟ ಬಹುಶಃ ಇದು ಕೊನೆಯದಲ್ಲಾ, ಇದು ಕೊನೆಯ ದಾಖಲೆಯಾಗಿದೆ. [3]ಮತ್ತಾಯ ಹಾಗೂ ಮಾರ್ಕನ ಹೇಳಿಕೆ ಒಂದೇಯಾಗಿರುತ್ತದೆ. ಮಾರ್ಕನು ಹೇಳಿದ್ದು ವಿವಾದ ಸ್ಪದವಾಗಿದೆ. [4]ನಾನು ನನ್ನ ಓದುಗರಿಗೆ ಎರಡು ಹೇಳಿಕೆಗಳನ್ನು ಪರಿಗಣಿಸಿರಿ ಎಂದು ಹೇಳುತ್ತೇನೆ. [5]"ಮೂರನೆ ಪರಲೋಕದಲ್ಲಿ" ಕಂಡದ್ದನ್ನು ಪೌಲನು ತಿಳಿಸಬಾರದು ಎಂದು ಹೇಳಿಕೊಂಡಂತೆ (2 ಕೊರಿಂಥ 12:2-4). ಲಾಜರನ ಪುನರುತ್ಥಾನದ ನಂತರದ ವಿಚಾರವೂ ಇದೇ ರೀತಿಯಲ್ಲಿದೆ. [6]KJVಯಲ್ಲಿ "ಜಟಮಾಂಸಿ" ಎಂದಿದೆ. [7]ಲಾಜರನನ್ನು ಈ ವಿಧವಾದ ತೈಲದಿಂದ ಏಕೆ ಸಿದ್ಧಪಡಿಸಲಿಲ್ಲ ಎಂಬ ಸಂಶಯವಿರಬಹುದು. ಒಂದನ್ನು ಲಾಜರನಿಗಾಗಿ ಬಳಸಿ, ಇನ್ನೊಂದನ್ನು ಸಂರಕ್ಷಿಸಿ ಇಟ್ಟಿರಬಹುದು. [8]ಮರಣ ಹೊಂದಿದವರಿಗೆ "ಬೆಲೆಯುಳ್ಳ" ತೈಲವನ್ನು ಬಳಸಿದ್ದಾರೆ ಎಂಬ ಕುರಹಾಗಿ ತೈಲದ ಭರಣಿಯನ್ನು ಮೃತ ದೇಹದ ಬಳಿ ಇಟ್ಟಿರುತ್ತಿದ್ದರು ಮೃತ ದೇಹಕ್ಕೆ ಗೌರವ ಸಲ್ಲಿಸಲು ಹಣವನ್ನು ವ್ಯರ್ಥವಾಗಿ ಖರ್ಚುಮಾಡುತ್ತಿಲ್ಲಾ ಎಂಬುದನ್ನು ತಿಳಿಸುತ್ತದೆಂದು ಬಾರ್‌ಕ್ಲೆ ಸೂಚಿಸಿದರು (William Barclay, *The Gospel of Mark,* rev. ed., The Daily Study Bible series [Philadelphia: Westminster Press, 1975], 326). [9]ಉದಾಹರಣೆ ಒಬ್ಬ ಬಾಲಕನು ತನ್ನ ತಂದೆಯ ತೈಲವನ್ನು ಅಂಟಿಸಿಕೊಂಡಿದ್ದು. ಆ ಕೊಠಡಿಯ "ತುಂಬ" ಸುವಾಸನೆಯಿತ್ತು. [10]ಗ್ರೀಕ್ ಪ್ರಕಾರದ KJV "ದಿನಾರಿ" (ಹಣ).

[11]ಒಂದು ವರ್ಷಕ್ಕಿಂತ ಹೆಚ್ಚಿನ NIV "ಕೂಲಿ." [12]ಅಮೇರಿಕೆದಲ್ಲಿ 52 ವಾರದ ಕೂಲಿ. ನೀವು ನಿಮ್ಮ ಸ್ಥಳಿಯ ಕೂಲಿಯನ್ನು ವಿವರಿಸಿ. [13]ಐದು ಸಾವಿರ ಜನರು ಊಟ ಮಾಡಿದ ನಂತರ, ಉಳಿದಿದ್ದನ್ನು ಕೂಡಿಸಿದರು (ಮತ್ತಾಯ 14:20). [14]ಬಡವರಿಗೆ ದಾನ ನೀಡುವದು ಪಸ್ಕದ ಒಂದು ಪದ್ಧತಿಯಾಗಿತ್ತು ಎಂದು ಅನೇಕ ಪಂಡಿತರ ಅಭಿಪ್ರಾಯವಾಗಿತ್ತು (ಮತ್ತಾಯ 19:21; ಲೂಕ 14:13). [15]ಧರ್ಮೋಪದೇಶ ಕಾಂಡ 15:11 ನೋಡಿ. [16]ನಾವು ಬಡವರಿಗೆ ಒಳಿತ ಮಾಡಲು ದೇವರು ಬಯಸುತ್ತಾರೆ (ಜ್ಞಾನೋಕ್ತಿ 19:17; ಗಲಾತ್ಯ 2:10). [17]ಯೋಸೇಫ, ನಿಕೋದೆಮರು ತಮಗೆ ದೊರಕಿದ ಸಮಯದಲ್ಲಿ ಒಳಿತನ್ನೇ ಮಾಡಿದ್ದರು (ಯೋಹಾನ 19:38-40), ಆದರೆ ಅವರ ಕಾರ್ಯ ಅಪೂರ್ಣವಾಯಿತು. ನೋಡುತ್ತಿದ್ದ ಸ್ತ್ರೀಯರು ತಮ್ಮ ಕಾರ್ಯವನ್ನು ಪೂರ್ಣಮಾಡಲು ಯತ್ನಿಸಿದರು ಲೂಕ 23:53-24:1ರ ಮುಖ್ಯ ವಿಷಯವಾಗಿತ್ತು. [18]ಈ ವ್ಯಾಖ್ಯಾನದಲ್ಲಿ ಮಹಾನಂಬಿಕೆ ಹಾಗೂ ಭರವಸೆ ಅಡಗಿದೆ, ಯೇಸು ತನ್ನ ಹೂಣಿಡುವಿಕೆ ಹಾಗೂ ಲೋಕಕ್ಕೆಲ್ಲಾ ಪ್ರಕಟವಾಗುವ ಸುವಾರ್ತೆಯ ಬಗ್ಗೆ ಮಾತಾಡಿದನು. ಪುನರುತ್ಥಾನದ ನಿರೀಕ್ಷೆಯನ್ನು ತಿಳಿಸಿದನು, ಇದನ್ನು ಶಿಷ್ಯರು ಲೋಕಕ್ಕೆ ಸಾರಿದರು. [19]ಈ ಮೂರು ಪಾಠಗಳನ್ನು Banowsky, 23-26 ರಿಂದ ತೆಗೆದುಕೊಳ್ಳಲಾಗಿದೆ. [20]ಅನೇಕ ಶಿಷ್ಯರು ಯೂದನಿಗೆ ಪ್ರೋತ್ಸಾಹ ನೀಡಿದರೂ, ಯೂದನು ಟೀಕೆಯನ್ನು ಮುಂದುವ ರೆಸಿದನು.

[21]ನನ್ನ ಜೀವನದಲ್ಲಿ ಅನೇಕ ನಿದರ್ಶನಗಳಿವೆ, ನಿಮ್ಮಲ್ಲೂ ಇರಬಹುದು. [22]ನಾವಿರುವ ಸ್ಥಳದಲ್ಲಿರುವ ಕ್ರೈಸ್ತರ ಕಾಲೇಜ್ ಅಥವಾ ಯೂನಿರ್ವಸಿಟಿ. [23]ಮುಂದಿನ ಎರಡು ವಾಕ್ಯಗಳು ಸ್ಥಳಿಯ ಸಭೆಗೆ ಅಳವಡಿಸಿಕೊಳ್ಳುವುದಕ್ಕೆ ಉದ್ದೇಶಿಸಲಾಗಿದೆ. ಸಂಸ್ಕೃತಿಗನುಗುಣವಾಗಿ ಬಳಸಿ. [24]ಈ ಉದಾಹರಣೆ ಮತ್ತು ಮುಂಬರುವುದು Banowsky, 24-25 ರಿಂದ ತೆಗೆದುಕೊಳ್ಳಲಾಗಿದೆ. [25]William Barclay, *The Gospel of Matthew,* vol. 2, rev. ed., The Daily Study Bible Series (Philadelphia: Westminster Press, 1975), 330. [26]ಶಾಲಾ ಕೊಠಡಿಯಲ್ಲಿರುವವರು ಆ ನಿದರ್ಶನ ಬಳಸಿರಿ, ನಿಮಗೆ ತಿಳಿದಿರುವ ಒಂದು, ಎರೆಡು ಉದಾಹರಣೆಯನ್ನು ಹೇಳಿ.